# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103
ದೂರವಾಣಿ: 0816–2254546, 0816–2255596, 0816–2255597 ಫ್ಯಾಕ್ಸ್: 0816–2270719

**ಸಂಖ್ಯೆ:ತುವಿ:ಖ.ಕೋ:ವಾ.ವ:2025–26/1854** **ದಿನಾಂಕ:12.09.2025**

## ದರಪಟ್ಟಿ ಆಹ್ವಾನ

**ವಿಷಯ:** ತುಮಕೂರು ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಪುಸ್ತಕ ರೂಪದಲ್ಲಿ ಮುದ್ರಿಸಿ ಸರಬರಾಜು ಪಡೆಯಲು ದರಪಟ್ಟಿಯನ್ನು ಆಹ್ವಾನಿಸಿರುವ ಕುರಿತು.

**ಉಲ್ಲೇಖ:**1. ಉಪಕುಲಸಚಿವರು, ಅಭಿವೃದ್ಧಿ ವಿಭಾಗ ಇವರ ಟಿಪ್ಪಣಿ ಸಂಖ್ಯೆ:ತುವಿ:ಅ.ವಿ:2025–26:1826 ದಿನಾಂಕ: 10.09.2025.
2. ವಿ.ವಿ ಅಧಿಸೂಚನೆ ಪತ್ರದ ಸಂಖ್ಯೆ: ತುವಿತು:ಕೆ.ಟಿ.ಪಿ.ಪಿ/ತಿ.ಪ/ಖ.ಕೋ/2022–23/9035 ದಿನಾಂಕ: 09.09.2022.
3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:12.09.2025

*****

ತುಮಕೂರು ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಕನ್ನಡ ಮತ್ತು ಆಂಗ್ಲ ಆವೃತ್ತಿಯಲ್ಲಿ ವರದಿಗಳನ್ನು ಮುದ್ರಿಸಿ ಸರಬರಾಜು ಪಡೆಯುವ ಸಂಬಂಧ ಉಲ್ಲೇಖ(02)ರ ವಿಶ್ವವಿದ್ಯಾನಿಲಯದ ಆದೇಶದಂತೆ ಕೆಳಕಂಡ ಕೋಷ್ಟಕದಲ್ಲಿ ತಿಳಿಸಿರುವಂತೆ, ಷರತ್ತುಗಳಿಗೊಳಪಟ್ಟು ಆಸಕ್ತ ನೋಂದಾಯಿತ ಸಂಸ್ಥೆಗಳಿಂದ ಉಲ್ಲೇಖ(03)ರ ಅನುಮೋದನೆ ಮೇರೆಗೆ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| ಕ್ರ.ಸಂ | ವಾರ್ಷಿಕ ವರದಿಯ ವಿನ್ಯಾಸ ಮತ್ತು ಮುದ್ರಣ ವಿವರ | ಅಂದಾಜು ಪ್ರಮಾಣ | ಮುದ್ರಣದ ದರ ರೂ. (ಒಂದು ಪ್ರತಿಗೆ, ಎಲ್ಲಾ ತೆರಿಗೆಗಳು ಸೇರಿದಂತೆ) |
|---|---|---|---|
| 1 | <u>2024–25ನೇ ಸಾಲಿನ ವಾರ್ಷಿಕ ವರದಿ (ಕನ್ನಡ ಆವೃತ್ತಿ)</u><br>**Approximate Pages: 180-200**<br>**Dimension 8 ½ 11 Size**<br>**Paper: Maplitho paper 80 gsm**<br>**Cover 4 pages 300 gsm**<br>**Multicolour Print, art card with outer matt Lamination**<br>**Binding: Perfect Binding** | 60 | |
| 2 | <u>2024–25ನೇ ಸಾಲಿನ ವಾರ್ಷಿಕ ವರದಿ (ಆಂಗ್ಲ ಆವೃತ್ತಿ)</u><br>**Approximate Pages: 180-200**<br>**Dimension 8 ½ 11 Size**<br>**Paper: Maplitho paper 80 gsm**<br>**Cover 4 pages 300 gsm**<br>**Multicolour Print, art card with outer matt Lamination**<br>**Binding: Perfect Binding** | 60 | |
| 3 | **Soft Copy CD with sticker (Kannada & English)** | **375** | |

<u>ಷರತ್ತು ಮತ್ತು ನಿಬಂದನೆಗಳು:</u>

1. ಮುಚ್ಚಿದ ಲಕೋಟೆಯ ಮೇಲೆ **"ತುಮಕೂರು ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ವಾರ್ಷಿಕ ವರದಿಯನ್ನು ಪುಸ್ತಕ ರೂಪದಲ್ಲಿ ಮುದ್ರಿಸಿ ಸರಬರಾಜು ಮಾಡಲು ದರಪಟ್ಟಿ"** ಎಂದು ಸ್ಪಷ್ಟವಾಗಿ ನಮೂದಿಸತಕ್ಕದ್ದು.
2. **NSIC/MSME ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.**
3. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 20.09.2025 ಅಪರಾಹ್ನ 3.30 ಗಂಟೆ**
4. ದರಪಟ್ಟಿಗಳನ್ನು **ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್.ರಸ್ತೆ ತುಮಕೂರು–572 103** ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಲ್ಲಿ ವಿಶ್ವವಿದ್ಯಾನಿಲಯವು ಜವಾಬ್ದಾರರಾಗುವುದಿಲ್ಲ.
5. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.

**(ಪು.ತಿ.ನೋ)**

6. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
7. ವಿಶ್ವವಿದ್ಯಾನಿಲಯವು ಸೂಚಿಸುವ ಸ್ಥಳಕ್ಕೆ ಮುದ್ರಣ ಮಾಡಿದ ಪುಸ್ತಕಗಳನ್ನು ಸರಬರಾಜು ಮಾಡುವುದು ಮತ್ತು ಸಾರಿಗೆ ವೆಚ್ಚವನ್ನು (ತಗಲುವ ಕಾರ್ಮಿಕರ ವೆಚ್ಚ) ಸರಬರಾಜುದಾರರೇ ಭರಿಸತಕ್ಕದ್ದು.
8. ದರಪಟ್ಟಿಯಲ್ಲಿ ನಮೂದಿಸುವ ದರಗಳು ತೆರಿಗೆ, ಸಾಗಾಣಿಕಾ ವೆಚ್ಚ ಮತ್ತು ಇತರೆ ಸೇವೆಯ ಮೊತ್ತವನ್ನು ಒಳಗೊಂಡಿರತಕ್ಕದ್ದು.
9. ದರಪಟ್ಟಿಯಲ್ಲಿ ನಮೂದಿಸಿರುವ ಮುದ್ರಣದ ಪ್ರಮಾಣವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿರುತ್ತದೆ.
10. ತುಮಕೂರು ವಿಶ್ವವಿದ್ಯಾನಿಲಯದ 2024-25ನೇ ಸಾಲಿನ ವಾರ್ಷಿಕ ವರದಿಯನ್ನು ಪುಸ್ತಕ ರೂಪದಲ್ಲಿ ಕನ್ನಡ ಮತ್ತು ಆಂಗ್ಲ ಆವೃತ್ತಿಗಳನ್ನು ಸರಬರಾಜು ಆದೇಶ ನೀಡಿದ ಒಂದು ವಾರದೊಳಗಾಗಿ ಮುದ್ರಿಸಿ ಸರಬರಾಜು ಮಾಡತಕ್ಕದ್ದು.
11. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.
12. ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.
13. ಹೆಚ್ಚಿನ ವಿವರಗಳು ಅಥವಾ ಮಾಹಿತಿಯು ಅಗತ್ಯವಿದ್ದಲ್ಲಿ **ಉಪಕುಲಸಚಿವರು, ಅಭಿವೃದ್ಧಿ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರನ್ನು ಸಂಪರ್ಕಿಸಬಹುದು.

**ಆದೇಶದ ಮೇರೆಗೆ,**

ಉಪಕುಲಸಚಿವರು

ಉಪಕುಲಸಚಿವರು
ಖರೀದಿ ಕೋಶ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

**ಪ್ರತಿಗಳು:**

1. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಉಪಕುಲಸಚಿವರು, ಅಭಿವೃದ್ಧಿ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ಮಾಹಿತಿಗಾಗಿ
3. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸತಕ್ಕದ್ದು)
4. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಕಛೇರಿ ಪ್ರತಿ.